# St. Joseph's College (Autonomous), Bengaluru-27
## III Semester BCom.
## Semester Examination: January 2022
## KAC -318 Kannada

**Time: 2 ½ Hours** **Marks:70**

**This question paper contains two printed pages and four parts**

---

**ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ .**

**I ಅ. ಒಂದರ ಭಾವಾರ್ಥವನ್ನು ಬರೆಯಿರಿ.** **1×5=5**

1. ಮರವನೇರಿದ ಮರ್ಕಟನಂತೆ
   ಹಲವು ಕೊಂಬೆಗೆ ಹಾಯುತ್ತಲಿದ್ದೇನೆ,
   ಬೆಂದ ಮನವ ನಾನೆಂತು ನಂಬುವೆನಯ್ಯಾ?
   ಎಂತು ನಚ್ಚುವೆನಯ್ಯಾ?
   ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ
   ಹೋಗಲೀಯದಯ್ಯಾ

2. ಹೊಸಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು
   ಹೊಸಯುಕ್ತಿ ಹಳೆ ತತ್ವದೊಡಗೂಡೆ ಧರ್ಮ
   ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ
   ಜಸವು ಜನಜೀವನಕೆ - ಮಂಕುತಿಮ್ಮ

**ಆ. ಯಾವುದಾದರೂ ಮೂರನ್ನು ಸಂದರ್ಭ ಸಹಿತ ವಿವರಿಸಿ.** **3×5=15**

3. "ಹನ್ನೆರಡು ವರುಷದಿಂ ಬಹನೀತನೆಮ್ಮನೆಗೆ"
4. "ವರುಷದ ಮಗಳು ಇವಳೆನಗೆ ಸರ್ಪಗಾವಲು"
5. "ಕೊಲೆಗಡಿಕನೆನಿಪ ಹುಲಿ ಸಲಹದೇಂ ಮರಿಗಳನು?"
6. "ಸವತಿ ತಾಯಿಗಿಂತ ಕಾಡೇ ಲೇಸು"
7. ಸುಡು ಸುಡು ಮನವಿದು ವಿಷಯಕ್ಕೆ ಹರಿವುದು.
8. ಯಾವ ಮೋಹನ ಮುರಳಿ ಕರೆಯಿತೊ ದೂರತೀರಕೆ ನಿನ್ನನು?

**II ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರ ಬರೆಯಿರಿ.** **2×10=20**

9. ಆತ್ಮನಿಗೆ ಪರಮಾತ್ಮನ ಕರೆಯೇನೆಂಬುದನ್ನ 'ಮೋಹನ ಮುರಲಿ' ಕಾವ್ಯದಲ್ಲಿ ಹೇಗೆ ವಿವರಿಸಿದ್ದಾರೆ?
10. ಬುದ್ದನ ಶಿಷ್ಯ ತಿಷ್ಯ ಚಿನಿವಾರನ ಮನೆಯಲ್ಲಿ ಕಳ್ಳತನದ ಆರೋಪದಡಿ ಶಿಕ್ಷೆಗೊಳಗಾದ ಸಂದರ್ಭವನ್ನು ವಿವರಿಸಿ.
11. ಜಿ ಪಿ ರಾಜರತ್ನಂ ಮಡಿಕೇರಿಗೂ ಮಂಜಿಗೂ ಇರುವ ಅನ್ಯೋನ್ಯತೆಯನ್ನು ತಮ್ಮ ಕವನದಲ್ಲಿ ಹೇಗೆ ನಿರೂಪಿಸಿದ್ದಾರೆ?
12. ಮಾದಿಯ ನಿರ್ದಯಿ ಮನಸ್ಸು ನಾಗಿಯ ದುರಂತಕ್ಕೆ ಹೇಗೆ ಕಾರಣವಾಯಿತೆಂಬುದನ್ನು ವಿವರಿಸಿ.

## III ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಬರೆಯಿರಿ. 2x10=20

13. ನಮ್ಮ ಜೀವನದ ಮೇಲೆ ಅಧಿಕಾರ ನಡೆಸುವ ಮತ-ಧರ್ಮಗಳ ವಿಷಯದಲ್ಲಿ ಚಿಕಿತ್ಸಕ ಬುದ್ಧಿಯನ್ನು ಹೇಗೆ ತಿಳಿಸಬೇಕೆಂದು ಶಿವರಾಮ ಕಾರಂತರು ವಿವರಿಸಿದ್ದಾರೆ?
14. ಜಾತಿಗಳ ಹುಟ್ಟು ಮತ್ತು ಬೆಳವಣಿಗೆ ಕುರಿತು ಡಾ. ಬಿ.ಆರ್ ಅಂಬೇಡ್ಕರ್ ನಿಲುವೇನು ವಿವರಿಸಿ.
15. ಲಿಂಗ ತಾರತಮ್ಯದಿಂದ ಆಧುನಿಕ ಹೆಣ್ಣು ಅನುಭವಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ.
16. ಪೌರಾಣಿಕ ಮಹಾಕಾವ್ಯಗಳಲ್ಲಿನ ಪಂಚಕನ್ಯೆಯರು ಅನುಭವಿಸಿದ ಹಿಂಸೆ ನೋವನ್ನು ಎಚ್‌ಎಸ್ ಶ್ರೀಮತಿಯವರು 'ಸ್ತ್ರೀವಾದದ ಹಿನ್ನೆಲೆಯಲ್ಲಿ' ಹೇಗೆ ನಿರೂಪಿಸಿದ್ದಾರೆ?

## IV ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 10×1=10

17. ಮನುಷ್ಯ ದೇವರಿಗಾಗಿ ಗುಡಿ ಕಟ್ಟುವುದಕ್ಕಿಂತ ಮೊದಲು ಏನನ್ನು ಕಟ್ಟಲು ಕಲಿತ?
18. ಮತ ಧರ್ಮಗಳ ಮೇಲೆ ಹಿಡಿತ ಸಾಧಿಸಿದ ಶಕ್ತಿಗಳು ಯಾವುವು?
19. ದೇವರನ್ನು ಒಲಿಸುವ ಬಗೆ ಯಾವುದು?
20. ಜಾತಿಗಳ ಹುಟ್ಟು ಮತ್ತು ಬೆಳವಣಿಗೆ ಕೃತಿಯ ಮೂಲ ಕರ್ತೃ ಯಾರು?
21. ಭಾರತದಲ್ಲಿ ಪ್ರಚಲಿತವಾಗಿರುವ ವಿವಾಹ ಪದ್ಧತಿ ಯಾವುದು?
22. ಯುದ್ಧ ಕಲೆಗಳನ್ನು ಅವಲಂಭಿಸಿದ ವರ್ಗ ಯಾವುದು?
23. ಭಾರತದಲ್ಲಿ ಯಾರನ್ನು ಜಾತಿಯನ್ನು ಸೃಷ್ಟಿಸಿದ ಎಂದು ನಂಬಲಾಗಿದೆ?
24. ಹಿಂದೂ ಸಮಾಜವು ಎಷ್ಟು ವರ್ಗಗಳಿಂದ ರೂಪಿತವಾಗಿದೆ?
25. ಪ್ರೇಮದ ವಿಚಾರಕ್ಕೆ ಸ್ವತಂತ್ರ ಪ್ರವೃತ್ತಿ ತೋರಿದ ಇಬ್ಬರೂ ಪುರಾಣ ಮೂಲದ ಸ್ತ್ರೀಯರು ಯಾರು?
26. ಆದರ್ಶ ನಾರಿ ಪಟ್ಟಿಯಲ್ಲಿರುವ ಬುದ್ಧಿಜೀವಿಗಳೆನಿಸಿರುವ ಇಬ್ಬರು ಸ್ತ್ರೀಯರು ಯಾರು?